ಹೆಚ್ಚು ಬಾರಿ ಭೇಟಿ ನೀಡಿ ಪ್ರಗತಿ ವೀಕ್ಷಿಸಲು ತಿಳಿಸಿದೆ. ಶಾಲಾ ಸಂಕೀರ್ಣಗಳನ್ನು ರಚಿಸಿ ಈ ಸಂಕೀರ್ಣಗಳ ಮುಖಾಂತರ ಶಿಕ್ಷಕರಿಗೆ ಹೆಚ್ಚಿನ ರೀತಿಯ ತರಗತಿ ವ್ಯವಸ್ಥೆ ಮಾಡಲಾಗಿದೆ. ಶಾಲೆಯಲ್ಲಿರುವ ಗ್ರಂಥಾಲಯ ಮತ್ತು ಪ್ರಯೋಗಾಲಯ ಇವುಗಳನ್ನು ವ್ಯವಸ್ಥಿತವಾಗಿ ಉಪಯೋಗಿಸಲು ಶಿಕ್ಷಕರಿಗೆ ಸೂಚಿಸಿದೆ.

ವಿಷಯ :- ದಕ್ಷಿಣ ಕನ್ನಡ ಜಿಲ್ಲೆಯ ಅನುದಾನಿತ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಸ್ಟಾಪ್-ಗ್ಯಾಪ್ ಉಪನ್ಯಾಸಕರುಗಳ ಸಂಬಳ ಕುರಿತು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1038 (1931)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ 19 ಅನುದಾನಿತ ಕಾಲೇಜುಗಳಲ್ಲಿ ಎಷ್ಟು ಜನ ಸ್ಟಾಪ್‌ಗ್ಯಾಪ್ ಉಪನ್ಯಾಸಕರುಗಳು ಕೆಲಸ ಮಾಡುತ್ತಿದ್ದಾರೆ;

ಆ) ಸ್ಟಾಪ್‌ಗ್ಯಾಪ್ ಉಪನ್ಯಾಸಕರುಗಳಿಗೆ ಖಾಯಂ ನೇಮಕಾತಿ ಹೊಂದಿದ ಉಪನ್ಯಾಸಕರುಗಳಿಗೆ ನೀಡಿರುವಷ್ಟೇ ಸಂಬಳವನ್ನು ನೀಡುವ ಸಮಯದಲ್ಲಿ ಹಿರಿಯರನ್ನು ಬಿಟ್ಟು ಕಿರಿಯರಿಗೆ ಕೊಡಲು ಕಾರಣಗಳೇನು; ಈ ತಾರತಮ್ಯವನ್ನು ನೀವಾರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

100

ದಿನಾಂಕ 29-01-92 ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಕ್ರಮ ಕೈಗೊಳ್ಳಲಾಗುತ್ತದೆ.

ವಿಷಯ :- ರಾಜ್ಯದ ಸರಕಾರಿ ಸಾರ್ವಜನಿಕ ಆಸ್ಪತ್ರೆಗಳಿಗೆ ಹೆಚ್ಚುವರಿ ಹಾಸಿಗೆಗಳ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1039 (1932)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಹೆಚ್ಚುವರಿ ಹಾಸಿಗೆಗಳನ್ನು ನೀಡಬೇಕೆನ್ನುವ ಪ್ರಸ್ತಾವನೆ ಸಂಬಂಧಪಟ್ಟ ಅಧಿಕಾರಿಗಳಿಂದ ಶಾಸಕರುಗಳಿಂದ ಸರ್ಕಾರಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?